ಮುಂಜಾವು

ವಾರಪತ್ರಿಕೆ.

ಸಂಪಾದಕ: ಶಿರಿಮನೆ ನಾಗರಾಜ್

ರಿಜಿಸ್ಟರ್ ನಂ. ಕೆಆರ್‌ಎನ್‌ಎಸ್ — ೧೯

ಸಂಪುಟ ೧ ಸಂಚಿಕೆ ೧೯ ಕೊಪ್ಪ ೨೭-೧೨-೮೨ ಭಾನುವಾರ ಬೆಲೆ ೪೦ ಪೈಸೆ

ಕಲ್ಲುಗುಡ್ಡೆ ಹರಿಜನರಿಂದ ಚುನಾವಣೆಗೆ ಬಹಿಷ್ಕಾರ

ಕಲ್ಲುಗುಡ್ಡೆಯ ಹರಿಜನರು ಸರಿಯಾದ ನೀರಿನ ವ್ಯವಸ್ಥೆಯಾಗದಿರುವುದು, ಮನೆ ನಿವೇಶನಗಳ ಅಸಮರ್ಪಕ ಹಂಚಿಕೆ, ದರಖಾಸ್ತು ಭೂಮಿ, ವೃದ್ಧಾಪ್ಯ ವೇತನ, 'ಭಾಗ್ಯ ಜ್ಯೋತಿ' ಮುಂತಾದುವುಗಳ ಬಗ್ಗೆ ಅಸಮಾಧಾನ—ಇತ್ಯಾದಿ ಕಾರಣಗಳಿಂದಾಗಿ ಇಲ್ಲಿನ ಹರಿಜನರು ಈ ಬಾರಿ ಚುನಾವಣೆ ಬಹಿಷ್ಕರಿಸುವ ನಿರ್ಧಾರ ತೆಗೆದುಕೊಂಡಿರುವುದಾಗಿ 'ಮುಂಜಾವು'ಗೆ ತಿಳಿಸಿದ್ದಾರೆ.

ಸಾಧನೆಗೆ, ಸೇವೆಗೆ ಮತನೀಡಿ: ಬೇಗಾನೆ

ಕೊಪ್ಪ ತಾಲ್ಲೂಕಿನ ಮುಖ್ಯಸ್ಥರ ಸಭೆಯಲ್ಲಿ ಮಾತನಾಡಿ, ತಮ್ಮ ಪಕ್ಷ ಮತ್ತು ತಾವು ಹಿಂದಿನ ವರ್ಷಗಳಲ್ಲಿ ಈ ಕ್ಷೇತ್ರಕ್ಕೆ ಸಾಕಷ್ಟು ಸೇವೆ ಸಲ್ಲಿಸಿದ್ದು, ಮುಂದೆ ವ್ಯಾಪಕವಾಗಿ ಬಡಜನರ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಿಂದ, ಇಂದಿರಾ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ" ಎಂದು ಬೇಗಾನೆ ರಾಮಯ್ಯ ಇಲ್ಲಿ ಡಿ. ೨೧ರ ಚುನಾವಣಾ ಸಭೆಯಲ್ಲಿ ಪ್ರಾರ್ಥಿಸಿದರು.

"ಕಳೆದ ಮೂವತ್ತು ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಆಗದಿದ್ದಂತಹ ಕೆಲಸಗಳನ್ನು ಕೇವಲ ಐದು ವರ್ಷ ಮಂತ್ರಿಯಾಗಿ ಮಾಡಿದ್ದೇನೆ" ಎಂದ ಅವರು, ಸೇತುವೆ, ರೋಡ್‌ವೇಲ್, ಶಾಲೆ-ಕಾಲೇಜುಗಳು, ಹಾಲಿನ ಶೈತ್ಯಾಗಾರ ಸ್ಥಾಪನೆ, ಭಾಗ್ಯಜ್ಯೋತಿ, ಆಶ್ರಯ, ನೇಗಿಲ ಭಾಗ್ಯ—ಮುಂತಾಗಿ ತಮ್ಮ ಹಾಗೂ ಗುಂಡೂರಾವ್ ಸರ್ಕಾರದ ಸಾಧನೆಗಳ ಉದ್ದ ಪಟ್ಟಿ ಮಾಡಿದರು. ಬಿ.ಜಿ.ಚಂದ್ರಶೇಖರ್, ಚಿದಂಬರ್ ಮುಂತಾದವರೂ ಭಾಷಣ ಮಾಡಿದರು.

ಜನಾಭಿಪ್ರಾಯ ಮುಖಂಡರ ತರಬೇತಿ ಶಿಬಿರಕ್ಕೆ ಆಹ್ವಾನ

ನೆಲ್ಲಿಕೊಪ್ಪದಲ್ಲಿ ಡಿ. ೨೯ರಂದು ಪ್ರಾಥಮಿಕ ಸ.ರಾ.ಪ್ರಾ.ಆ.ಕೇಂದ್ರ ಮತ್ತು ಮುನಿಸಿಪಲ್ ಸರಕಾರಿ ಆಯುರ್ವೇದಿಕ್ ಆಸ್ಪತ್ರೆಗಳ ಆಶ್ರಯದಲ್ಲಿ ಜನಾಭಿಪ್ರಾಯ ಮುಖಂಡರ ತರಬೇತಿ ಶಿಬಿರ ಏರ್ಪಾಡಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳು ಭಾಗವಹಿಸಬೇಕೆಂದು ಹಿರಿಯ ಆರೋಗ್ಯ ಶಿಕ್ಷಕರು ಕೋರಿದ್ದಾರೆ.

(ವರದಿ: ಜುಮುನಾ)

ಬಂಗಾರಪ್ಪ, ಬೇಗಾನೆ ಅವರುಗಳ ಬೃಹತ್ ಪ್ರಚಾರ ಸಭೆಗಳು

ಕೊಪ್ಪ: ಡಿ. ೨೬ರಂದು ಕೊಪ್ಪದಲ್ಲಿ ಮಂತ್ರಿ ಬೇಗಾನೆ ರಾಮಯ್ಯ ಹಾಗೂ ಕ್ರಾಂತಿರಂಗದ ಅಧ್ಯಕ್ಷ ಎಸ್.ಬಂಗಾರಪ್ಪ ಅವರುಗಳ ಚುನಾವಣಾ ಪ್ರಚಾರ ಸಭೆಗಳು ಬೃಹತ್ ಪ್ರಮಾಣದಲ್ಲಿ ನಡೆದವು.

ಸಂತೆಯ ದಿನ, ಬಸ್‌ಸ್ಟಾಂಡಿನಲ್ಲಿ ನಡೆದ ಬೇಗಾನೆಯವರ ಸಭೆಗೆ ಬಸ್‌ಸ್ಟಾಂಡಿನ ತುಂಬ ಜನ ಸೇರಿದ್ದರು. ವಿರೋಧ ಪಕ್ಷದ ಅಭ್ಯರ್ಥಿ ಹೆಚ್.ಜಿ. ಗೋವಿಂದಗೌಡರ ಅಂಗಡಿ ಎದುರು ನಡೆದ ಬಂಗಾರಪ್ಪನವರ ಸಭೆಗೆ ಜನ ಕಿಕ್ಕಿರಿದಿದ್ದರು. ಸುಮಾರು ಅರ್ಧ ಗಂಟೆ ಕಾಲ ರಸ್ತೆ ಬಂದ್ ಆಗಿತ್ತು.

ಬಂಗಾರಪ್ಪ: ಹಸ್ತಕ್ಕೆ ಮತ ನೀಡಿದರೆ ಬೆಲೆ ಏರಿಕೆಗೆ ಒಪ್ಪಿಗೆ ಕೊಟ್ಟಂತೆ

ಕೊಪ್ಪ: "ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದರೆ ಬಡವರು, ಜನ ಸಾಮಾನ್ಯರು ಬದುಕಲಾರದಷ್ಟಾಗಿರುವ ಬೆಲೆ ಏರಿಕೆಗೆ, ರೈತರ ಮೇಲಿನ ಗೋಲಿಬಾರಿಗೆ, ಭ್ರಷ್ಟಾಚಾರಕ್ಕೆ ಒಪ್ಪಿಗೆ ಕೊಟ್ಟಂತೆ" ಎಂದು ಬಂಗಾರಪ್ಪ ಎಚ್ಚರಿಸಿದರು.

ಇಂದಿರಾ ಗಾಂಧಿ ಅಧಿಕಾರ ಭ್ರಷ್ಟರಾಗಿದ್ದಾಗ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ತಾವೇ ರಾಜ್ಯಾದ್ಯಂತ ಸಂಘಟಿಸಿದ ಪಕ್ಷವನ್ನು ತಾವೇ ತೊರೆಯಲು ಕಾರಣ ವಿವರಿಸಿದ ಬಂಗಾರಪ್ಪ,"ಮಂತ್ರಿ ಪದವಿಗಿಂತ ನನಗೆ ಬಡವರ, ದೀನ ದಲಿತರ ಹಿತ ರಕ್ಷಣೆ ಮುಖ್ಯ. ಇಂದಿರಾ ಅವರಿಗೆ ಎಷ್ಟು ಹೇಳಿದರೂ ಬಂಡವಾಳ ಶಾಹಿಗಳನ್ನು ಹತೋಟಿಯಲ್ಲಿಡಲಿಲ್ಲ. ಬಡವರ ಹಿತ ಕಡೆಗಣಿಸಿದರು. ಇದಕ್ಕಾಗಿಯೇ ನಾನು ೨ನೇ ಬಾರಿ ಮಂತ್ರಿ ಪದವಿ ತ್ಯಜಿಸಿ, ಪಕ್ಷದಿಂದ ಹೊರಬಂದೆ" ಎಂದರು.

ತಮ್ಮನ್ನು ಗೆಲ್ಲಿಸಿದರೆ ಬಡಬಗ್ಗರ ಸೇವೆ ಮಾಡುವುದಾಗಿ ಜನತಾ ಅಭ್ಯರ್ಥಿ ಹೆಚ್.ಜಿ.ಗೋವಿಂದಗೌಡರು ತಮ್ಮ ಚುಟುಕು ಭಾಷಣದಲ್ಲಿ ಭರವಸೆ ಕೊಟ್ಟರು. ನಾನು ಒಳ್ಳೆಯವನೆನ್ನಿಸಿದರೆ ಮಾತ್ರ ಓಟು ಕೊಡಿ" ಎಂಬುದು ಅವರು ಹೋದಲ್ಲೆಲ್ಲ ಹೇಳುವ ಮಾತು.

ಮುರಿದ ಸೇತುವೆಯ ಮುಗಿಯದ ಕತೆ

ಬೇಗಾರು: ಇಲ್ಲಿನ ಸೇತುವೆಯದೊಂದು "ಮುಗಿಯದ ಕತೆ"ಯಾಗಿದೆ. ಸರ್ಕಾರದಲ್ಲಿ ಸ್ವಲ್ಪವಾದರೂ ಚಲನೆಯಿದ್ದಿದ್ದರೆ. ಇದರ ರಿಪೇರಿಗಾಗಿ ಈವರೆಗೆ ಖರ್ಚಾದ ಹಣ ಮತ್ತು ಇದರ ದುರವಸ್ಥೆಯಿಂದ ಪ್ರಯಾಣಿಕರಿಗಾದ ನಷ್ಟ ಇವುಗಳಿಂದ ಹೊಸದೊಂದು ಭರ್ಜರಿ ಸೇತುವೆಯೇ ಆಗುತ್ತಿತ್ತೋ.

ಈಗೆರಡು ವರ್ಷಗಳಿಂದ ಈ ಸೇತುವೆಯ ತೊಲೆಗಳು ಮುರಿದು ಹೋಗಿರುವುದರಿಂದ, ಶಿಂಗನಗದ್ದೆ ಕೆರೆಕಟ್ಟೆ ಬಂದಾಗ, ಪ್ರಯಾಣಿಕರು ಬವಣೆ ಪಡುತ್ತಾರೆ.

ಈ ವರ್ಷ ಸುಮಾರು ೩ ತಿಂಗಳಿಗೆ ಮೊದಲು ಕಟ್ಟಿ ನಿಂತಿದ್ದ ಸೇತುವೆಯ "ರಿಪೇರಿ"ಯನ್ನು ೨೧ ಸಾವಿರ ರೂ. ವೆಚ್ಚದಲ್ಲಿ ಚಿಕ್ಕಮಗಳೂರಿನ ಕಸ್ತೂರಿಬಾ ಸಂಸ್ಥೆಗೆ ವಹಿಸಲಾಗಿತ್ತು. ೩. ೧೫ ಸಂಜೆಯಿಂದ ಸೇತುವೆ ವಾಹನ ಸಂಚಾರಕ್ಕೆ ತೆರೆಯಿತಾದರೂ ೧೨ರ ಮಧ್ಯಾಹ್ನದ ಹೊತ್ತಿಗೆ ಪುನಃ ಜಖಂಗೊಂಡಿತು. ಮುರಿದ ತೊಲೆಗಳಿಗೆ ಹಾಕಿದ್ದ ಲೋಹದ ಬೆಸುಗೆಗಳು ಪುನಃ ಬಿಟ್ಟುಕೊಂಡಿದ್ದವು.

ಬೆಸುಗೆಯ ಬದಲು "ಯು" ಬೋಲ್ಟಿನಿಂದ ತೊಲೆಗಳನ್ನು ಕೂಡಿಸುವ ಕೆಲಸ ಈಗ ನಡೆದಿದೆಯೆಂದು ಗೊತ್ತಾಗಿದೆ. ಈ ಕ್ರಮದ ಬಗ್ಗೆ ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸುತ್ತಿದ್ದಾರೆ.

ಕೊಪ್ಪ ಕಿರಿಯ ಕಾಲೇಜಿನ ವರ್ಣರಂಜಿತ ವಾರ್ಷಿಕೋತ್ಸವ: 'ಎಂ.ಡಿ.'ಗೆ ಸನ್ಮಾನ; ಕಟ್ಟಡದಾನಕ್ಕೆ ಕೋರಿಕೆ

ಕೊಪ್ಪ: ಇಲ್ಲಿನ ಕಿರಿಯ ಕಾಲೇಜು ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಡಿ. ೨೩ ಮತ್ತು ೨೪ರಂದು ವರ್ಣರಂಜಿತವಾಗಿ ನಡೆಯಿತು.

ಸನ್ಮಾನ ಸಮಾರಂಭ

ಇದೇ ಸಂದರ್ಭದಲ್ಲಿ, "ಲೋಕಸೇವಾ ನಿರತ" ಎಂ.ಎಸ್.ದ್ಯಾವೇಗೌಡರ ಹೆಸರಲ್ಲಿ ಈ ಕಾಲೇಜು (ಪ್ರೌಢ ಶಾಲೆಯಾಗಿ) ಸ್ಥಾಪನೆಯಾಗಿ ೩೫ ವರ್ಷ ತುಂಬಿದ ನೆನಪಿನಲ್ಲಿ ಎಂ.ಡಿ.ಬಾಲಕೃಷ್ಣ ಅವರನ್ನು ಸನ್ಮಾನಿಸಿ ನೆನಪಿನ ಕಾಣಿಕೆ ಅರ್ಪಿಸಲಾಯಿತು.

ಸನ್ಮಾನ ಸಮಾರಂಭದ ಅಧ್ಯಕ್ಷತೆಯನ್ನು ಲೋಕೋಪಯೋಗಿ ಇಲಾಖೆಯ ಅ|ಎ| ಇಂಜಿನಿಯರ್ ಕೆ.ವಿ.ವೆಂಕಟಯ್ಯ ವಹಿಸಿದ್ದು, ಪುರಸಭಾ ಮುಖ್ಯಾಧಿಕಾರಿ ಆರ್.ಗುಂಡೂರಾವ್ ಆಟೋಟ ಸ್ಪರ್ಧೆಗಳ ಬಹುಮಾನ ಹಂಚಿದರು

ಕೊಠಡಿ ಕಟ್ಟಿಸಿ ಕೊಡಲು ಕೋರಿಕೆ

'ಎಂ.ಡಿ'ಯವರಿಗೆ ಬಿನ್ನವತ್ತಳೆ ಅರ್ಪಿಸಿದ ಕಾಲೇಜು ವಿದ್ಯಾರ್ಥಿ ಸಂಘ, ಕಾಲೇಜು ಸ್ಥಾಪನೆಯಾಗಿ ೩೫ ವರ್ಷ ಕಳೆದರೂ ಪ್ರೌಢ ಶಾಲೆ ಮತ್ತು ಕಾಲೇಜಿಗೆ ಪ್ರತ್ಯೇಕ ಕಟ್ಟಡಗಳಿಲ್ಲದೆ 'ಶಿಫ್ಟ್' ಕ್ರಮದಲ್ಲಿ ಒಪ್ಪೊತ್ತಿನ ಪಾಠ ನಡೆಯುತ್ತಿರುವ ಬಗ್ಗೆ ಅವರ ಗಮನ ಸೆಳೆಯಿತು. ಇನ್ನೊಂದೆರಡು ಕೊಠಡಿಗಳಿದ್ದಲ್ಲಿ ಪ್ರೌಢ ಶಾಲೆ ಮತ್ತು ಕಿರಿಯ ಕಾಲೇಜುಗಳನ್ನು ಪ್ರತ್ಯೇಕವಾಗಿ, ಸ್ವತಂತ್ರವಾಗಿ ನಡೆಸಲು ಸಾಧ್ಯವಿದ್ದು, ಇದರಿಂದ ವಿದ್ಯಾರ್ಥಿಗಳ ಈಗಿನ ಬವಣೆ ನಿವಾರಣೆಯಾಗುವುದರಿಂದ ಕೊಠಡಿಗಳನ್ನು ಉದಾರ ಮನಸ್ಸಿನಿಂದ ಕಟ್ಟಿಸಿಕೊಡಬೇಕೆಂದು ವಿದ್ಯಾರ್ಥಿ ಸಂಘ ಬಾಲಕೃಷ್ಣ ಅವರನ್ನು ವಿನಂತಿಸಿತು.

ಸನ್ಮಾನಕ್ಕೆ ಉತ್ತರವಾಗಿ ಮಾತನಾಡಿದ ಬಾಲಕೃಷ್ಣ ಅವರು, ವಿದ್ಯಾರ್ಥಿಗಳ ಮನವಿಯನ್ನು ಪ್ರಸ್ತಾಪಿಸಿದರು. ಈ ಬಗ್ಗೆ ಇನ್ನೂ ನಾಲ್ಕಾರು ಜನ ಸ್ನೇಹಿತರ, ಬಲ್ಲವರ ಜೊತೆ ಸಮಾಲೋಚಿಸಿ ತೀರ್ಮಾನ ಕೈಗೊಳ್ಳುವುದಾಗಿ ಭರವಸೆ ಕೊಟ್ಟರು.

ವಾರ್ಷಿಕೋತ್ಸವ

ಡಿ. ೨೪ರಂದು ನಡೆದ ವಾರ್ಷಿಕೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ಡಾ|| ಎಸ್.ಎಂ.ಶಾನಭಾಗ್ ವಹಿಸಿದ್ದು, ಶೃಂಗೇರಿ ಕಾಲೇಜಿನ ಉಪನ್ಯಾಸಕ ಕೆ.ಪುಟ್ಟಯ್ಯ ಮುಖ್ಯ ಅತಿಥಿಗಳಾಗಿದ್ದರು. ಡಿಎಫ್‌ಒ ಕೆ. ಸುಂದರನಾಯ್ಡು ಬಹುಮಾನ ಹಂಚಿದರು.

ಎರಡೂ ದಿನಗಳ ಸಮಾರಂಭದ ಕಡೆಯಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಂದ ಮನರಂಜನೆ ಹಾಗೂ ನಾಟಕಗಳು ನಡೆದವು.

ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಗಲಭೆಯಿಲ್ಲದೆ, ಶಿಸ್ತಾಗಿ, ಸಭ್ಯವಾಗಿ ಕಾರ್ಯಕ್ರಮಗಳು ನಡೆದವು.

ಶೃಂಗೇರಿಯಲ್ಲಿ ದಲಿತರ ಧರಣಿ

ಶೃಂಗೇರಿ: ದಲಿತರ ದರಖಾಸ್ತು ಭೂಮಿಯ ಪರಭಾರೆ ವಿಚಾರದಲ್ಲಿ ಹೈಕೋರ್ಟು ನೀಡಿರುವ ತೀರ್ಪು ಜಾರಿಗೆ ಬರುವಂತೆ ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ ಶೃಂಗೇರಿ ಶಾಖೆಯು ಡಿ. ೨೦ರಂದು ಮೆರವಣಿಗೆ ಮತ್ತು ಧರಣಿಯನ್ನು ನಡೆಸಿತು. ಸುಮಾರು ೧೦೦ ಮಹಿಳೆಯರೂ ಸೇರಿದಂತೆ ೧೫೦ಕ್ಕೂ ಹೆಚ್ಚು ದಲಿತರು ಪಾಲ್ಗೊಂಡಿದ್ದ ಈ ಮೆರವಣಿಗೆ ತಾಲ್ಲೂಕು ಕಛೇರಿಗೆ ಹೋಗಿ ತಹಸೀಲ್ದಾರರ ಗೈರು ಹಾಜರಿಯಲ್ಲಿ ಶಿರಸ್ತೇದಾರರಿಗೆ ಮನವಿ ಅರ್ಪಿಸಿದರು. ಧರಣಿ ಸಂಜೆಯವರೆಗೂ ನಡೆಯಿತು. ಧರಣಿಯ ನೇತೃತ್ವವನ್ನು ರಾಜ್ಯ ಸಂಚಾಲಕ ಎಂ.ಡಿ.ಗಂಗಯ್ಯ ಹಾಗೂ ತಾ|| ಸಂಚಾಲಕ ಗೋಪಾಲ್ ವಹಿಸಿದ್ದರು.

'ಮುಂಜಾವು'

ಚಂದಾ ದರ: ಆಜೀವ ಚಂದಾ ೨೦೦ ರೂ; ವಾರ್ಷಿಕ ಚಂದಾ ೨೦ ರೂ.

ಇಂದಿರಾ ಕಾಂಗ್ರೆಸ್ ಅಭ್ಯರ್ಥಿ ಬೇಗಾನೆ ರಾಮಯ್ಯನವರಿಗೆ

ಬೆಂಬಲವಾಗಿ ನನ್ನ ನಾಮಪತ್ರ ಹಿಂತೆಗೆದುಕೊಂಡಿದ್ದೇನೆ. ನನ್ನ ಬೆಂಬಲಿಗರು, ಕಾರ್ಯಕರ್ತರು, ಸಕಲ ವರ್ಗಗಳು ಶ್ರೀಯುತ ರಾಮಯ್ಯನವರ ಗೆಲುವಿಗೆ ಶ್ರಮವಹಿಸಬೇಕಾಗಿ ಕೇಳಿಕೊಳ್ಳುತ್ತೇನೆ.

—ಡಿ.ಎಂ.ಲಕ್ಷ್ಮೀಕಾಂತ್,

ಎಂ.ಎಸ್ಸಿ.,ಎಂ.ಎ.(ಸ್ಟ್ರ)

ಕೊಪ್ಪ ತಾಲೂಕು.

[illegible]

೭೨-೩೧-೫೭

ರೈತ ಸಂಘದ ನಿರ್ಣಯ: ಒಂದು ಸಮರ್ಥನೆ

"ಮುಂಜಾವು" ೧೨-೧೨-೮೭ರ ಸಂಚಿಕೆಯಲ್ಲಿ "ರೈತ ಸಂಘದ ನಿರ್ಣಯ: ಪರಿಣಾಮ ಏನು?" ಎನ್ನುವ ಲೇಖನದ ಅಡಿಯಲ್ಲಿ, "ರೈತ ಸಂಘ ಹೀಗೆ ದುರ್ಬಲವಾಗುವುದು ರೈತ ಸಮುದಾಯಕ್ಕೆ ಲಾಭದಾಯಕವಾದದ್ದೇನೂ ಅಲ್ಲ" ಎಂಬ ಅಭಿಪ್ರಾಯ ಇದೆ. ಆದರೆ ಈ ಭಾರತ ಅನ್ನೋ ಮಹಾಭಾರತದ ರಾಜಕೀಯದಲ್ಲಿ ಇದು ಅನಿವಾರ್ಯ ಅನ್ನುವುದನ್ನು ಗಮನಿಸಿದರೆ 'ರಾಜ್ಯ ರೈತ ಸಂಘದ ನಿರ್ಧಾರ ಅಷ್ಟು ಸರಿಯಲ್ಲ' ಎಂದು ದೋಷಾರೋಪಣೆಯನ್ನು ಪರೋಕ್ಷವಾಗಿಯಾದರೂ ಮಾಡುವುದು ತಪ್ಪಾಗುತ್ತದೆ.

ವಾಸ್ತವವಾಗಿ ರೈತ ಸಂಘ ಮೊದಲಿನಿಂದಲೂ ತಮಿಳುನಾಡು ರೈತ ಸಂಘವನ್ನು ಉದಾಹರಣೆಯಾಗಿಟ್ಟುಕೊಂಡೇ ಅಸ್ತಿತ್ವಕ್ಕೆ ಬಂದಿದೆ. ಅಲ್ಲಿನ ಮೂಲಸೂತ್ರವೇ, ರೈತ ಸಂಘದ ಪದಾಧಿಕಾರಿಗಳು ಯಾವದೇ ಪಕ್ಷದ ಪರವಾಗಿ ಪ್ರಚಾರ ಮಾಡಬಾರದು ಅಂದಿರುವಾಗ, ಒಮ್ಮೆ ಹಸಿರು ಪೇಟ ಸುತ್ತಿರುವವನು ಈಗ ಬಿಳಿ, ಕಪ್ಪು, ಕೆಂಪು ಟೋಪಿಗಳನ್ನು ಧರಿಸಿ ಬೇರೆ ಘೋಷಣೆ ಕೂಗುವುದೆಂದರೆ ಏನು? ತಪ್ಪಲ್ಲವೇ?

ಯಾವನಿಗೆ ರೈತನೆಂದೊಡನೇ ಮೈಮನ ಪುಳಕಗೊಳ್ಳುತ್ತದೋ, ಯಾವನು ರೈತನ ಏಳಿಗೆಯನ್ನೇ (ಇದನ್ನು ಮಾತ್ರ) ಹಾರೈಸುತ್ತಾನೋ, ಯಾವನು ರೈತಾಪಿ ಜನರ ಸಕಾಲಿಕ ಮತ್ತು ನ್ಯಾಯವಾದ ಬೇಡಿಕೆಗಳನ್ನು ಬೆಂಬಲಿಸುತ್ತಾನೋ, ಅವನು, ಈ ಸಮಸ್ಯೆಗಳನ್ನು ಇದುವರೆಗೆ ನಿಕೃಷ್ಟವಾಗಿ ಕಂಡು ಈಗ 'ಎಚ್ಚತ್ತಿರುವ' ಬೇರೆ ಪಕ್ಷಗಳ ಬಾವುಟವನ್ನು ಏಕೆ ಎತ್ತಿ ಹಿಡಿಯಬೇಕು? ಹಾಗೆ ಮಾಡಿದ್ದೇ ಆದರೆ ಅವನು ಪಕ್ಕಾ ರೈತ ಸಂಘೀಯನಲ್ಲ — ಬರೇ ಸಮಯ ಸಾಧಕ ಪ್ರವೃತ್ತಿಯ ಬೇರೆ ಪಕ್ಷದವನೇ ಎನ್ನ ಬೇಕಾದೀತು. ಏಕೆಂದರೆ ಬೇರೆ ಎಲ್ಲಾ ಪಕ್ಷಗಳವರೂ ಸ್ಥಿರವಾಗಿ ಒಂದು ನೀತಿ ಸಂಹಿತೆಗಾಗಲೀ, ಕನಿಷ್ಠ ಸೈದ್ಧಾಂತಿಕವಾಗಿಯಾಗಲೀ ಒಂದೇ ಪಕ್ಷಕ್ಕೆ ಕಟ್ಟುಬಿದ್ದವರೇಲ್ಲ. ಹಿಂದೆ ಅರಸರ ಜೊತೆಗಿದ್ದು, ನಂತರ ಗುಂಡೂರಾಯರ ಜೊತೆಗಿದ್ದು ಈಗ ಟಿಕೆಟ್ ಸಿಗಲಾರದೆಂದು ಅಲ್ಲಿ ಬಿಟ್ಟು ಕ್ರಾಂತಿ ರಂಗದಿಂದಲೋ ಜನತಾದಿಂದಲೋ ನಿಂತು, ಬಹುಶಃ ಗೆದ್ದರೆ ಮತ್ತೆ ಪಕ್ಷದಿಂದ ಪಕ್ಷಕ್ಕೆ ಜಿಗಿಯುವ ಉದ್ದೇಶವುಳ್ಳ ಅನೇಕರನ್ನು ನಾವು ಅನುಭವದಿಂದಲೇ ಬೆರಳುಮಾಡಿ ತೋರಿಸಬಹುದು. ಅಂತಹ ದೊಂಬರಾಟ ಆಡುವವರು ರೈತ ಸಂಘಕ್ಕೆ ಎಂದೂ ಬೆಂಬಲವಾದಾರು, ರೈತರ ಏಳಿಗೆಗೆ ದುಡಿದಾರು ಎಂದು ತರ್ಕಿಸುವುದು ಹೇಗೆ?

ಆದ್ದರಿಂದ ರೈತ ಸಂಘ ಈಗ ತಳೆದ ನಿರ್ಧಾರದಿಂದ ಸಂಘಟನೆ ಸ್ವಲ್ಪ ದುರ್ಬಲಗೊಂಡಿದ್ದೇ ಆದರೆ ಅದು ನಿರ್ಧಾರದಿಂದಲ್ಲ —ಬೆಂಬಲಿಸಿದ ವ್ಯಕ್ತಿಗಳ ತಪ್ಪಿನಿಂದ. 'ಸರ್ಕಾರವನ್ನು ಬಗ್ಗಿಸುವುದು', 'ನ್ಯಾಯ ದೊರಕಿಸುವುದು' — ಇತ್ಯಾದಿ ಬುರುಡೆಗಳು, ಈ ಜನರು ರೈತಸಂಘದ ಮೇಲೆ ದೋಷಾರೋಪಣೆ ಮಾಡಲು ಬಳಸಿಕೊಳ್ಳಬಹುದೇ ಹೊರತು, ಬಹುಶಃ ಇವರೇ ರೈತ ಸಂಘದ ಪರವಾಗಿ ಅದೇ ಹಸಿರು ಟೊಪ್ಪಿ ಧರಿಸಿ ಚುನಾವಣೆಯಲ್ಲಿ ಗೆದ್ದಿದ್ದರೂ ಅದನ್ನೆಲ್ಲ ಮಾಡಲು ಮನಸ್ಸು ಮಾಡುತ್ತಿದ್ದರೆಂದು ನಂಬಲು ಸಾಧ್ಯವಿಲ್ಲ. ಏಕೆಂದರೆ ಯಾವುದೇ ರಾಜಕೀಯಕ್ಕಿಳಿಯದೆ ರೈತರೇ ಸಂಘಟನೆಯಾಗಿ, ಯಾವುದೇ ಪಕ್ಷಕ್ಕಿಂತ, ಸರಕಾರಕ್ಕಿಂತಲೂ ಬಲಿಷ್ಠವಾಗಿ ತನ್ನ ಉದ್ದೇಶ ಸಾಧಿಸಿಕೊಳ್ಳಬಹುದಾಗಿದ್ದ ಅವಕಾಶವನ್ನು ಬಿಟ್ಟು, ಅಂತಹ ಅವಕಾಶಕ್ಕಾಗಿ ಕಾಯಲಾರದೇ, '....ಉಂಡವನೇ ಜಾಣ'ರಾಗಲು ತರಾತುರಿಯಲ್ಲಿ ಚುನಾವಣೆಯ ಕಣಕ್ಕಿಳಿದದ್ದು 'ಪರಹಿತ'ಕ್ಕಾಗಿ ಎನ್ನಲಾಗದು. ಇವರುಗಳನ್ನು ರೈತ ಸಂಘದ ಹಸಿರು ಟೊಪ್ಪಿಯವರು ಎಂದು ಗುರ್ತಿಸಿದರೆ ತಪ್ಪಾಗುತ್ತದೆ. ಇವರುಗಳು ಏಣಿಯನ್ನು ಬಳಸಿಕೊಂಡ—ಪ್ರಕಾಶಿಕೆ ಬೇರೆಯೇ ಇರುವ —ಬೇರೆ ರಾಜಕೀಯ ಪಕ್ಷದವರು ಎನ್ನದೆ ವಿಧಿಯಿಲ್ಲ.

ಇನ್ನು ರೈತ ಸಂಘಕ್ಕೆ ಆಗಬಹುದಾದ ಆಘಾತಕ್ಕೂ ವಿಷಾದ ವ್ಯಕ್ತಪಡಿಸಬೇಕಾಗಿಲ್ಲ. ರೋಂ ನಗರ ಒಂದೇ ದಿನಕ್ಕೆ ಕಟ್ಟಲ್ಪಡಲಿಲ್ಲ. ಈ ಹಸಿ ಇಟ್ಟಿಗೆ, ಅರ್ಧ ಸುಟ್ಟ ಇಟ್ಟಿಗೆ, ಮಣ್ಣು, ಎಲ್ಲಾ ಮಿಶ್ರಮಾಡಿ ಕಟ್ಟಿದ ಕಟ್ಟಡಕ್ಕಿಂತ, ನೆತ್ತಿಯಿಂದ ಕಾಲುಂಗುಷ್ಠದವರೆಗೂ ರೈತನಾಗಿರಬಲ್ಲ ಪಕ್ಕಾ ಕಾರ್ಯಕರ್ತರನ್ನು, ಸದಸ್ಯರನ್ನು ಶೋಧಿಸಲು ಸಂಘ ಪ್ರಯತ್ನ ಪಡಬೇಕು. ಆ ಕಾರ್ಯಕರ್ತರಿಗೆ ಇಂದಿನ ಅಧಿಕಾರದ ಆಸೆಯೇ ಇರಲಿಕ್ಕಿಲ್ಲ. ಅಂತಹವರು ತಾವಾಗಿ ಮೂಡಿಬರುತ್ತಾರೆ. ಆಯ್ದು ರೂಪು ಕೊಡಬೇಕು, ಅಷ್ಟೆ. (ಬಿ.ಜೆ.ಪಿ.ಉದಾಹರಣೆ?)

ಅದುವರೆಗೆ ತನ್ನ ರಾಜಕೀಯರಹಿತ ತತ್ವಕ್ಕೆ ವಿದಾಯ ಹೇಳುವುದು ಸಂಘಕ್ಕೆ ಬೇಕಿಲ್ಲ. ಈ ಮೂಲ ತತ್ವಕ್ಕೆ ಬದ್ಧವಾಗಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ತಾಲ್ಲೂಕು ಮಟ್ಟದ, ಗ್ರಾಮಮಟ್ಟದ ಕಾರ್ಯಕರ್ತರನ್ನು ಕೇಳುವ ಅವಶ್ಯಕತೆ ಇಲ್ಲ. ಏಕೆಂದರೆ ಇದು ನಿರ್ಧರಿತ ತತ್ವಕ್ಕೆ ತಿದ್ದುಪಡಿ ತರುವುದೇನಲ್ಲವಷ್ಟೆ.

ಸಿ.ರಾ.ಸುಹಾಬಲಯ್ಯ,
ಶೃಂಗೇರಿ.

ನಮ್ಮ ಪ್ರತಿನಿಧಿಗಳು/ಏಜೆಂಟರು

ಅಡ್ಡಗದ್ದೆ: ಶಿವಶಂಕರರಾವ್, ಪೋಸ್ಟ್‌ಮಾಸ್ಟರು.

ನೆಮ್ಮಾರು: ಎ. ಎಲ್. ಅಣ್ಣಯ್ಯ ಹೆಗ್ಡೆ, ನೆಮಾರು.

ಜಯಪುರ: ಎಂ. ಕೆ. ಸೀತಾರಾಮು, ವ್ಯಾಪಾರಿಗಳು, ಜಯಪುರ.

ಉತ್ತಮ ಕಾರ್ಯಕ್ರಮದ ಸೈಂಟ್ ಜೋಸೆಫ್ಸ್ ವಾರ್ಷಿಕೋತ್ಸವ

ಡಿಸೆಂಬರ್ ೧೭ರಂದು ಕೊಪ್ಪದ ಸೈಂಟ್ ಜೋಸೆಫ್ಸ್ ಕಾನ್ವೆಂಟ್ ಶಾಲಾ ವಾರ್ಷಿಕೋತ್ಸವದಲ್ಲಿ ಉತ್ತಮ ಕಾರ್ಯಕ್ರಮ ಮೂಡಿ ಬಂತು. ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು.

ಶಿಸ್ತಿನ ಕಾರ್ಯಕ್ರಮ ಮಾಡುವುದರಲ್ಲಿ ಕಾನ್ವೆಂಟ್ ಶಾಲೆಯವರು ತುಂಬಾ ಶ್ರಮ ಪಡುತ್ತಾರೆ. ಸಂಜೆ ಆರು ಘಂಟೆಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಪ್ರಥಮವಾಗಿ ಶಾಲೆಯ ಚಿಕ್ಕ ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆಯ ನಂತರ ಸ್ವಾಗತ ನೃತ್ಯದೊಂದಿಗೆ ಅಂದಿನ ಅಧ್ಯಕ್ಷರಾದ ಎಂ.ಡಿ.ಬಾಲಕೃಷ್ಣರವರನ್ನು ವೇದಿಕೆಗೆ ಕರೆತರಲಾಯಿತು. ಶಾಲಾ ವರದಿ, ಬಹುಮಾನ ವಿತರಣೆಯ ನಂತರ ಬಾಲಕೃಷ್ಣರವರು ಹಿತವಾಗಿ ಒಳ್ಳೆಯ ನಾಲ್ಕು ಮಾತುಗಳನ್ನು ಆಡಿ ಜನರನ್ನು ಸಂತೋಷಪಡಿಸುವುದರ ಮೂಲಕ ತಮ್ಮ ಅಧ್ಯಕ್ಷ ಭಾಷಣವನ್ನು ಚುಟುಕಾಗಿ ಮುಗಿಸಿದರು.

ನಂತರ ಮನರಂಜನೆಯ ವಿಭಾಗದಲ್ಲಿ ಸಿಸ್ಟರ್ ಜನೆವೀರಾ ಇವರ ನಿರ್ದೇಶನದ ಬಿದಿರು ನೃತ್ಯ ತುಂಬಾ ಚೆನ್ನಾಗಿ ಮೂಡಿ ಬಂತು. ಬೆಸ್ತರ ನೃತ್ಯ, ರೈತರ ನೃತ್ಯ, ಚಿಕ್ಕಮಕ್ಕಳ ನೃತ್ಯ ಜನರನ್ನು ತುಂಬಾ ಆಕರ್ಷಿಸಿತು.

ಕೊನೆಯ ಕಾರ್ಯಕ್ರಮವಾದ "ತಾಯಿ ಕರುಳು" ನಾಟಕದಲ್ಲಿ ಅತ್ಯುತ್ತಮವಾಗಿ ತಾಯಿ ಪಾತ್ರ (ಅಜ್ಜಿ) ಮಾಡಿದ ಕುಮಾರಿ ಅನಿತಾ ಇವರ ಅಭಿನಯ ತುಂಬಾ ಮೆಚ್ಚುವಂಥದ್ದು. ಕುಮಾರಿ ಬಿ.ವಿ.ಶೋಭಾ, ಕು॥ ಹೆಚ್.ಬಿ.ಜಯಶ್ರೀ ಇವರೂ ಸಹ ತಮ್ಮ ಅಭಿನಯದಿಂದ ಜನರನ್ನು ಸಂತೋಷಪಡಿಸಿದರು. ಉತ್ತಮವಾಗಿ ಮೂಡಿಬಂದ "ತಾಯಿ ಕರುಳು" ನಾಟಕದ ನಿರ್ದೇಶಕರು ಶ್ರೀ ಕೆ.ಮಂಜುನಾಥ ಶೆಟ್ಟಿ.

ಒಟ್ಟಿನಲ್ಲಿ ಅಂದಿನ ಎಲ್ಲಾ ಕಾರ್ಯಕ್ರಮಗಳೂ ಜನರಿಗೆ ಸಂತೋಷ ಉಂಟುಮಾಡಿದವು.

—ಕೆ.ಎಸ್.ರತ್ನಾಕರ.

ಚುನಾವಣೆ ಅಬ್ಬರದ ನಡುವೆ ನಿಃಶಬ್ದವಾಗಿ ದಲಿತ ಜಾಗೃತಿ

ದಲಿತ ಸಂಘರ್ಷ ಸಮಿತಿಯ ಕೊಪ್ಪ ತಾಲ್ಲೂಕ್ ಶಾಖೆ ಆರಂಭ

ಸುಮಾರು ಜನ ಮಹಿಳೆಯರೂ ಸೇರಿದಂತೆ ಒಂದು ಸಾವಿರ ಜನ ದಲಿತರು ಸ್ವಾತಂತ್ರ್ಯ, ಸಮಾನತೆಗಾಗಿ, ಉದ್ಯೋಗ ಹಾಗೂ ಬದುಕುವ ಹಕ್ಕುಗಳಿಗಾಗಿ ಘೋಷಣೆ ಕೂಗುತ್ತ ಕೊಪ್ಪದ ಪೇಟೆಯಲ್ಲಿ ಮೆರವಣಿಗೆ ನಡೆಸಿದರು. ಎಂದೂ ಯಾರೂ ಸಂಘಟಿಸದಿದ್ದ ಜನ ಇಷ್ಟು ದೊಡ್ಡ ಸಂಖ್ಯೆಯಲ್ಲಿ ಒಟ್ಟಾಗಿ, ಮೆರವಣಿಗೆ ನಡೆಸಿದ್ದು ಕೊಪ್ಪದ ಇತಿಹಾಸದಲ್ಲಿ ಅಪರೂಪದ ಘಟನೆ. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಯುವಕರು ಕೊಪ್ಪ ತಾಲ್ಲೂಕಿನ ಎಲ್ಲೆಡೆ ಸಂಚರಿಸಿ, ಚುನಾವಣೆಯ ಅಬ್ಬರದ ನಡುವೆ ನಿಃಶಬ್ದವಾಗಿ ಇವರನ್ನೆಲ್ಲ ಸಂಘಟಿಸಿದ್ದರು.

ಅನಂತರ ತಾ॥ ಶಾಖೆಯ ಉದ್ಘಾಟನೆಯನ್ನು ರಾಜ್ಯ ಸಂಚಾಲಕ ಎಂ.ಡಿ.ಗಂಗಯ್ಯನವರ ಅಧ್ಯಕ್ಷತೆಯಲ್ಲಿ ಭದ್ರಯ್ಯ ನೆರವೇರಿಸಿದರು. ಕೆ.ಎಂ.ಶಂಕರಪ್ಪ ಮುಖ್ಯ ಅತಿಥಿಯಾಗಿದ್ದರು. ಕೆ. ಎಂ. ಗೋಪಾಲ್ ಸ್ವಾಗತಿಸಿ, ವಂದಿಸಿದರು.

ಭಾಷಣಕಾರರು ದಲಿತ ಸಂಘರ್ಷ ಸಮಿತಿ ಹುಟ್ಟಿ, ಬೆಳೆದು ಬಂದ ರೀತಿ, ಅದರ ಧ್ಯೇಯೋದ್ದೇಶಗಳು, ಅದು ದಲಿತರನ್ನು ಸಂಘಟಿಸಿ ನಡೆಸಿದ ಹೋರಾಟಗಳು, ಅಂಬೇಡ್ಕರ್‌ರವರ ವಿಚಾರಗಳು — ಮುಂತಾದ ವಿಷಯಗಳ ಬಗ್ಗೆ ವಿವರವಾಗಿ ಮಾತನಾಡಿದರು.

ತಲೆತಲಾಂತರದಿಂದ, ಮುಂದುಯುವ ಜನವರ್ಗವಾದ ದಲಿತರನ್ನು ಸಮಾಜದಲ್ಲಿ ಕೀಳುಸ್ಥಾನದಲ್ಲಿರಿಸಿ, ವಿದ್ಯೆ ಕಲಿಯಲು ಅವಕಾಶ ನಿರಾಕರಿಸಿ, ಧರ್ಮ, ಸಂಪ್ರದಾಯ, ಸಂಸ್ಕೃತಿಗಳ ಹೆಸರಲ್ಲಿ ಅವರನ್ನು ಗುಲಾಮರಾಗಿ ನಡೆಸಿಕೊಂಡದ್ದು; ಪ್ರಪಂಚವೆಲ್ಲ ಮುಂದುವರಿದು, ನಮ್ಮ ದೇಶವೂ ೩೫ ವರ್ಷದ ಹಿಂದೆಯೇ ಸ್ವತಂತ್ರವಾಗಿ ದೇಶದ ಇತರರು ಆಧುನಿಕತೆಯ ಎಲ್ಲ ಸೌಲಭ್ಯಗಳನ್ನೂ ಬಳಸಿ ಮುಂದೆ ಬರುತ್ತಿದ್ದರೂ ದಲಿತ ವರ್ಗದ ಜನ ಇನ್ನೂ ಒಂದು ಹೊತ್ತಿನ ಕೂಳಿಗಾಗಿ ಪಡಬಾರದ ಯಾತನೆ ಪಡುತ್ತ ಅಜ್ಞಾನ, ಅನಾರೋಗ್ಯ, ದಾರಿದ್ರ್ಯಗಳಿಂದ ಕೊಳಚೆಗಳಲ್ಲಿ ವಾಸಿಸುತ್ತಿರುವುದು; ಶ್ರೀಮಂತ ವರ್ಗಗಳು ಬೇರೆ ಬೇರೆ ಪಾರ್ಟಿ ಕಟ್ಟಿಕೊಂಡು, ದಲಿತರನ್ನು ಉದ್ಧಾರ ಮಾಡುತ್ತೇವೆನ್ನುತ್ತ ಅವರನ್ನು ಇನ್ನೂ ಇನ್ನೂ ಹೆಂಡ–ಹಿಡಿಕೂಳಿನ ದಾಸರನ್ನಾಗಿಸುತ್ತಿರುವುದು; ಇದರಿಂದಾಗಿ, ದಲಿತರು ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಏಳ್ಗೆ ಹೊಂದಬೇಕಾದರೆ ಸ್ವತಂತ್ರವಾಗಿ ತಾವೇ ಸಂಘಟನೆಯಾಗಬೇಕಾದ ಅಗತ್ಯ; ಇದಕ್ಕೆ ಉದಾಹರಣೆಯಾಗಿ—ಹರಿಜನ ಜಾತಿಯಲ್ಲಿ ಹುಟ್ಟಿದ ಡಾ॥ ಭೀಮರಾವ್ ಅಂಬೇಡ್ಕರ್ ಅವರು ಅಸ್ಪೃಶ್ಯತೆ, ದಾರಿದ್ರ್ಯ, ಅಜ್ಞಾನಗಳ ಹೊರತಿ–ಅಪಮಾನಗಳನ್ನು ಅನುಭವಿಸಿ, ಅವುಗಳಿಂದ ಬಿಡುಗಡೆ ಪಡೆಯಲು ದಲಿತರು ವಿದ್ಯಾವಂತರಾಗಲೇಬೇಕಾದ ಅಗತ್ಯ ಕಂಡುಕೊಂಡದ್ದು; ಸ್ವತಃ ಅಪಾರ ವಿದ್ಯಾವಂತರಾಗಿ, ದಲಿತ ಜನಾಂಗದ ಸಂಘಟನೆಗಾಗಿ ತಮ್ಮ ಜೀವನವನ್ನೇ ಸವೆಸಿದ್ದಲ್ಲದೆ ಸೈದ್ಧಾಂತಿಕವಾಗಿ ಗಾಂಧೀಜಿ – ನೆಹರೂರವರನ್ನೂ ಎದುರಿಸಿದ್ದು; ಸ್ವತಂತ್ರ ಭಾರತದ ಕಾನೂನು ಮಂತ್ರಿಯಾಗಿ, ಭಾರತದ ಸಂವಿಧಾನ ಕರ್ತೃವಾಗಿ, ಶ್ರೀಮಂತ ವರ್ಗಗಳ, ಕಂದಾಚಾರಿಗಳ, ಪ್ರತಿಗಾಮಿಗಳ ಕುತಂತ್ರ, ವಿರೋಧಗಳೆದುರು ದಲಿತ ವರ್ಗಗಳ ಹಿತಾಸಕ್ತಿಯನ್ನು ಎತ್ತಿಹಿಡಿದದ್ದು—ಮುಂತಾದ ವಿಷಯಗಳನ್ನು ಭಾಷಣಕಾರರು ವಿವರಿಸಿದರು.

ಬೆಳಗೊಳದ ತಮ್ಮಣ್ಣ ಸಂಚಾಲಕರಾಗಿ, ಹೊಸಕೊಪ್ಪದ ಕೆಂಪಣ್ಣ ಖಜಾಂಚಿಯಾಗಿ ಆಯ್ಕೆಯಾಗಿದ್ದು, ೧೫ ಜನರ ನಿರ್ದೇಶಕ ಮಂಡಳಿಯನ್ನು ಆರಿಸಲಾಯಿತು.

ಓದುಗರ ಪತ್ರಗಳು

ಅಣೆಕಟ್ಟಿನ ಕೆಲಸದಲ್ಲಿ
ಬೇಜವಾಬ್ದಾರಿ ವಿರುದ್ಧ ಎಚ್ಚರಿಕೆ

ಕೊಪ್ಪ ತಾಲ್ಲೂಕ್, ಮೇಗುಂದ ಹೋಬಳಿ, ಕಲ್ಲು ಗುಡ್ಡೆ ಗ್ರಾಮ, ಮೆಣಸಿನಹಾಡ್ಯವು ಪೂರ್ಣ ಗುಡ್ಡಗಾಡು (ಗಿರಿ) ಜನಾಂಗ ವಾಸಿಸುವ ಊರಾಗಿದೆ. ಹಿಂದೆ ಇಲ್ಲಿಗೆ ಯಾವ ಅಧಿಕಾರಿಯ ಸುಳಿವು ಹಾಗೂ ಸರಕಾರಿ ಸೌಲತ್ತುಗಳ ಪೂರೈಕೆಯೂ ಇರಲಿಲ್ಲ. ಈಗ ಇಲ್ಲಿನ ಅಲ್ಪ-ಸ್ವಲ್ಪ ಅಕ್ಷರಸ್ಥರ ಬೇಡಿಕೆಯ ಫಲವಾಗಿ ಕೆಲವು ಸರಕಾರಿ ಸೌಲತ್ತುಗಳು ಸಿಗುತ್ತಿವೆ. ಇನ್ನೂ ಕೆಲವು ಸೌಲತ್ತುಗಳು ದುಷ್ಕರ್ಮಿಗಳಿಂದ ದುರುಪಯೋಗವಾಗುತ್ತಿವೆ.

ಇದೇ ಎರಡು ವರ್ಷಗಳ ಹಿಂದೆ ಮಳೆಯನ್ನೆ ಆಶ್ರಯಿಸಿದ್ದ ಗದ್ದೆಗಳಿಗೆ, ನೀರಾವರಿಯ ಬೇಡಿಕೆಯನ್ನು ಸರ್ಕಾರದ ಮುಂದೆ ಇಟ್ಟಾಗ ಅದರ ಫಲವಾಗಿ ನೀರಾವರಿಗೆಂದು ೫೦ ಸಾವಿರಕ್ಕೂ ಮಿಕ್ಕಿ ಹಣ ಮಂಜೂರಾಯಿತು. ಈ ಬಂಡವಾಳದಿಂದ ಗದ್ದೆಗಳ ಮಧ್ಯದಲ್ಲಿ ಹಾದು ಹೋಗುವ ಹಳ್ಳಕ್ಕೆ ಅಡ್ಡ ಕಟ್ಟೆ ಕಟ್ಟಿ ಕಾಲುವೆ ಮುಖಾಂತರ ನೀರು ಪೂರೈಸುವಂತೆ ನಿರ್ಧರಿಸಲಾಯಿತು.

ಇದರ ಗುತ್ತಿಗೆಯನ್ನು ಊರಿನ ಸಮೀಪದ ಹೆಗ್ಗಾರು ಕುಡಿಗೆಯ ಒಬ್ಬರು ವಹಿಸಿಕೊಂಡಿದ್ದರು. ಇದು ಮಂಜೂರಾದ ಸಮಯದಲ್ಲಿ ಇಂಜಿನಿಯರ್‌ಗಳು, ಕಂಟ್ರಾಕ್ಟರಗಳು ಎಡಬಿಡದೆ ಬಂದು ಪೂರ್ವಸಿದ್ಧತೆ ನಡೆಸಿ ಕೆಲಸವನ್ನು ಪ್ರಾರಂಭಿಸಿದ್ದಾಯಿತು. ಆದರೆ ಎರಡು ವರ್ಷಗಳು ಸಂದಿದ್ದರೂ ಅದು ಅರ್ಧ ಕೆಲಸದಲ್ಲಿಯೇ ನಿಂತಿದೆ. ಹಳ್ಳದ ನೀರು ಹಳ್ಳದಲ್ಲಿಯೇ ಹರಿದು ಹೋಗುತ್ತಿದೆ. ಕಾಲುವೆಯಂತೂ ಅರ್ಧ ಅಗಿ ಹಾಳು ಬಿದ್ದಿದೆ. ಹಳ್ಳದ ಅಡ್ಡ ಗಟ್ಟೆಯು ಮುಗಿಯುವುದರೊಳಗೆ ತೂತುಬಿದ್ದು ಹಾಳಾಗಿದೆ. ೫೦ ಸಾವಿರಕ್ಕೂ ಮಿಕ್ಕಿದ ಬಂಡವಾಳದ ಉಪಯೋಗದಿಂದ ೫ ಅಡಿ ಉದ್ದಗಲದ ಭೂಮಿಗೂ ಉಪಯೋಗವಾಗಿಲ್ಲ.

ಕೆಲಸವನ್ನು ಯಾವಾಗ ಮುಕ್ತಾಯ ಮಾಡುತ್ತೀರಿ ಎಂದು ಗುತ್ತಿಗೆದಾರರನ್ನು ಕೇಳಿದರೆ, "ದೀಪಾವಳಿಯ ಬೇಗ್ಗೆ"; "ಗದ್ದೆ ಕೊಯ್ಲಿನ ಬೇಗ್ಗೆ" ಎಂಬುದಾಗಿ ಹೇಳುವುದಲ್ಲದೆ "ನೀವು ಅದರ ಬಗ್ಗೆ ಯೋಚನೆ ಮಾಡುವುದೇ ಬೇಡ" ಎಂದು ಹೇಳುತ್ತಾ ಬಂದು ಎರಡು ಮಳೆಗಾಲಗಳೇ ಕಳೆದು ಹೋಗಿವೆ.

ಇಂತಹ ಬೇಜವಾಬ್ದಾರಿಯ ಕೆಲಸಗಳು ನಡೆಯುತ್ತಿರುವುದು ಸಹಜವಾದರೂ, ಇಂತಹವು ನಿಲ್ಲಬೇಕು. ಯಾವ ಕಾರಣಕ್ಕೂ ಸರ್ಕಾರಿ ಹಣ ದುರುಪಯೋಗವಾಗಬಾರದು.

ಆದರಿಂದ, ನಮ್ಮೂರಿನ ನೀರಾವರಿ ಕೆಲಸದಲ್ಲಿ ಬೇಜವಾಬ್ದಾರಿ ಮತ್ತು ಉದಾಸೀನತೆಗಳಿಗೆ ಸಂಬಂಧಪಟ್ಟವರು ಸೂಕ್ತ ಸಮಜಾಯಿಷಿ ನೀಡಿ, ಕೆಲಸವನ್ನು ಕೂಡಲೇ ನಿರ್ವಹಿಸಬೇಕು. ಇಲ್ಲವಾದರೆ ತೀವ್ರವಾದ ಪರಿಣಾಮವನ್ನು ಎದುರಿಸಬೇಕಾದೀತೆಂದು ಎಚ್ಚರಿಸುತ್ತೇನೆ. ನಾವಂತೂ ಸಾಧ್ಯವಾದ ಎಲ್ಲಾ ರೀತಿಗಳಲ್ಲೂ ಈ ಬೇಜವಾಬ್ದಾರಿಯ ವಿರುದ್ಧ ಹೋರಾಡಲು ತಯಾರಿ ಮಾಡುತ್ತಿದ್ದೇನೆ.

—ಕೆಂಪೇಗೌಡ, ಮೆಣಸಿನ ಹಾಡ್ಯ.

ಕನ್ನಡ ಉದ್ಧಾರಕ್ಕೆ ೬ ಕೋಟಿ ರೂ. ಧ್ವಂಸ ಮಾಡಲೇಬೇಕೆ?

ಮಾನ್ಯರೆ,

ದಿ. ೧೪-೧೧-೮೩ ಹಾಗೂ ೧೨-೧೨-೮೩ರ ನಿಮ್ಮ ಪತ್ರಿಕೆಯಲ್ಲಿ ವಿಶ್ವ ಕನ್ನಡ ಮೇಳದ ಬಗ್ಗೆ ಹರಿಹರಪುರ ಸುಬ್ರಹ್ಮಣ್ಯಂ ಅವರ ಅಭಿಪ್ರಾಯ ಓದಿ ಇದನ್ನು ಬರೆಯುತ್ತೇನೆ.

ದೇಶದಲ್ಲಿ ದುರ್ಭಿಕ್ಷ ನೀಗಿಸಲು ಅಸಾಧ್ಯವಾಗಿ ಹಣ-ಶ್ರಮ ವೆಚ್ಚವಾಗಲಿ, ಆದರೆ ಸಹಸ್ರಾರು ವರ್ಷಗಳಿಂದ ಕಲೆ, ವಿಜ್ಞಾನ ಇತ್ಯಾದಿ ವಿಷಯಗಳಲ್ಲಿ ಆಗಾಗ ಸರ್ಕಾರಗಳು ಅನೇಕ ಮಹಾ ಸಾಧನೆಗಳನ್ನು ಮಾಡುತ್ತ ಬಂದಿವೆಯೆಂಬ ಅಭಿಪ್ರಾಯದಲ್ಲಿ ಅವರು ಬರೆದಿದ್ದಾರೆ. ಅಂದರೆ ವಿಶ್ವ ಕನ್ನಡ ಮೇಳ ಅಂಥ ಯಾವ ಮಹಾ ಸಾಧನೆಗೆ ಸಮ?

ಮೇಳದ ಹೆಸರಲ್ಲಿ ಯಾರೋ ಲಪಟಾಯಿಸುತ್ತಾರೆಂದರೆ, ಈಗ ಎಲ್ಲ ಕಡೆ ಲಪಟಾಯಿಸುತ್ತಾರೆ; ಆದ್ದರಿಂದ ಮೇಳದ ಬಗ್ಗೆ ಆಕ್ಷೇಪಣೆ ಸಲ್ಲದು ಎಂಬ ಅವರ ಅಭಿಪ್ರಾಯವನ್ನೇ ಎಲ್ಲದಕ್ಕೂ ಬಳಸಿದರೆ—ದೇಶದ ಭ್ರಷ್ಟಾಚಾರ ತುಂಬಿದೆ ಎಂದು ನಾವು ಹೇಳುವ ಹಾಗೇ ಇಲ್ಲ. ಹಾಗೆಯೇ ದೇಶದ ಯಾವುದೇ ಅನಿಷ್ಟದ ಬಗ್ಗೆ ಮಾತಾಡುವಂತಿಲ್ಲ. ಎಲ್ಲ ಕಡೆಯೂ ಅನಿಷ್ಟವೇ ಇದೆಯಲ್ಲ?

ಸಮ್ಮೇಳನ ಘೋಷಣೆಯಾದಾಗಿನಿಂದಲೇ ಪ್ರತಿಭಟನೆ ಶುರುವಾಗಿದೆ, ವ್ಯಾಪಕವಾಗಿ ಬಂದಿದೆ. ಅದು 'ಬಂದ್ [illegible]' ತಾಗಲಿಲ್ಲ ಅಷ್ಟೆ. ಆದ್ದರಿಂದ "ಈಗ ವಿರೋಧಿಸಿದರೇನು ಫಲ?" ಎಂಬುದು 'ಕುರುಡಾಗಿ' ಸಮರ್ಥಿಸಿಕೊಳ್ಳಲು ಒಂದು ನೆಪ ಅಷ್ಟೆ.

ಹೊರನಾಡ ಕನ್ನಡಿಗರು ಸಾಹಿತ್ಯ ರಂಗದಲ್ಲಿ ಇನ್ನೂ 'ಬದುಕಿ'ದ್ದಾರೆ, ನಿಜ. ಆದರೆ ಎಷ್ಟು ಜನ ಕನ್ನಡವನ್ನು ಇನ್ನೂ ತಮ್ಮ ಮನೆಯ ಎಲ್ಲರಿಗೂ ಮಾತೃಭಾಷೆಯಾಗಿ ಮುಂದು ವರಿಸಿದ್ದಾರೆ? ಇದು ಡಾ। ಎಸ್.ವಿ.ಎಂ. ರಂತೆ ಸಮ್ಮೇಳನರ ಪ್ರಶ್ನೆ. ಮತ್ತು, ಅಂಥ ಹೊರನಾಡ ಸಾಹಿತಿಗಳನ್ನೂ ಪ್ರತಿ ವರ್ಷದ 'ಪುಣ್ಯತಿಥಿ'ಗೇ ಆಹ್ವಾನಿಸಬಹುದು. ಅದಕ್ಕೆ ವಿಶ್ವ ಮೇಳವೇ ಬೇಕೆ?

ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರದ ನಿರ್ಮಾಣ, ಪುಸ್ತಕ ಪ್ರಕಾಶನದಂಥ ಕನ್ನಡ-ಸಂಸ್ಕೃತಿ ಉದ್ಧಾರದ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದಾದಲ್ಲಿ ಈ ಆರು ಕೋಟಿ ರೂ.ಗಳನ್ನು ಧ್ವಂಸ ಮಾಡದೆಯೂ ಮಾಡಬಹುದು.

—ವಿಮಲೇಶ್, ಸ.ರಾ.ಪುರ

ಜಾಹೀರಾತಿಗೆ 'ಮುಂಜಾವು' ಅತ್ಯುತ್ತಮ ಮಾಧ್ಯಮ

ಕೊಪ್ಪದಲ್ಲಿ ಅಪರೂಪಕ್ಕೆ ಚಿತ್ರಕಲಾಕೃತಿಗಳ ಪ್ರದರ್ಶನ

ಚಿತ್ರಕಲೆಯ ಹವ್ಯಾಸಿಗಳ ಕೂಟವಾದ ಮಂಗಳೂರಿನ ಆರ್ಟಿಸ್ಟ್ಸ್ ಕಂಬೈನ್ಸ್‌ನವರ ಚಿತ್ರ ಕಲಾಕೃತಿಗಳ "ಪ್ರದರ್ಶನ ಮತ್ತು ಮಾರಾಟ" ಇದೇ ೧೯ ಮತ್ತು ೨೦ರಂದು ಕೊಪ್ಪದಲ್ಲಿ ಏರ್ಪಟ್ಟಿತ್ತು. ಗಣೇಶ್ ಸೋಮಯಾಜಿ, ಎನ್ವಿ ಸಿಕೇರಾ, ಮರ್ಲಿನ್ ರಸ್ಕಿನ್ಹಾ, ಸಂಜೀವ ಶೆಟ್ಟಿ ಇವರುಗಳ ಜಲ ವರ್ಣ ಮತ್ತು ತೈಲ ವರ್ಣ ಚಿತ್ರಗಳು ಹಾಗೂ ಗೀತಾಂಜಲಿಯವರ ಬಾಟಿಕ್ ಚಿತ್ರಗಳು ಪ್ರದರ್ಶಿಸಲ್ಪಟ್ಟಿದ್ದವು.

ಸುಮಾರಾಗಿ ಎಲ್ಲವೂ ಬದುಕು ಮತ್ತು ಪ್ರಕೃತಿಯ ವಿವಿಧ ಸನ್ನಿವೇಶಗಳ ಚಿತ್ರಗಳೇ ಆಗಿದ್ದವು. ತೀರ ಆಧುನಿಕ ಶೈಲಿಯದಲ್ಲದ, ಸಹಜವಾಗಿ, ಸರಳವಾಗಿ ರಚಿಸಲ್ಪಟ್ಟಿದ್ದ ಈ ಚಿತ್ರಗಳು ತೀರ ಆಧುನಿಕ ಶೈಲಿಗಳ ಪರಿಚಯ ಅಷ್ಟಾಗಿಲ್ಲದ ಕೊಪ್ಪದ ನೋಡುಗರಿಗೆ ಚೆನ್ನಾಗಿಯೇ ಹಿಡಿಸಿದವು. ಚಿತ್ರಕಲಾ ಪ್ರದರ್ಶನ ಕೊಪ್ಪಕ್ಕೊಂದು ಅಪರೂಪದ ಸಂದರ್ಭವಾಗಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಜನರೂ ಭೇಟಿ ಕೊಟ್ಟಿದ್ದರು.

ಪ್ರದರ್ಶನ ಯಶಸ್ವಿಯಾದ್ದು ಬಹುವಾದರೂ ಚಿತ್ರಗಳ ಮಾರಾಟದ ದೃಷ್ಟಿಯಿಂದ ಅಷ್ಟೇನೂ ಯಶಸ್ವಿಯಾಗಲಿಲ್ಲವೆಂಬುದು ಬೇಸರದ ಸಂಗತಿ.

ಮತಕ್ಕೆ ಬೆಲೆ ಬರಬೇಕಾದರೆ ಕಾಂಗ್ರೆಸ್ಸಿಗೆ ವೀಡಿ

ಚುನಾವಣೆಗಳು ಬರುತ್ತವೆ. ಪ್ರತಿ ಪಕ್ಷಗಳು ಹೋರಾಡುತ್ತವೆ. ವಿರೋಧ ಪಕ್ಷಗಳು ಇರಬೇಕು; ಅವಶ್ಯಾಗಿ [illegible] ಪರಿಣಾಮ—ಸೋಲು ಕಟ್ಟಿಕೊಳ್ಳುತ್ತಿ.

ಜನಗಳ ಮನಸ್ಸಿಗೆ (ಕರ್ನಾಟಕದಲ್ಲೂ ಕೂ), ಶ್ರೀಮತಿ ಗಾಂಧಿ 'ಅಭಯ ಹಸ್ತ' ನೀಡಿ ಮರೆಯುವಂತೆ ಮಾಡಿದ್ದಾರೆ. ಸಿನಿಮಾ ನಟ ರಾಜಕುಮಾರರಿಗೆ [illegible] ಕೊಟ್ಟಿಂತೆ, ಪ್ರತಿಸಲ ಚುನಾವಣೆಯಲ್ಲಿ, ಶ್ರೀಮತಿ ಗಾಂಧಿಯವರ ಪಕ್ಷದಲ್ಲಿ ನಿಂತರೆ ಅಭ್ಯರ್ಥಿಗೆ ಗೆಲುವು ಖಂಡಿತ.

ಯಾವ ಪಕ್ಷ ಗೆದ್ದರೂ, ಜನ ಮತವ [illegible] ಪಡೆಯಬೇಕು. ಪ್ರಾರಂಭದಿಂದಲೂ ಕಾಂಗ್ರೆಸ್ ಪಕ್ಷ ಬಹುಮತದಿಂದ ಗೆಲ್ಲುತ್ತಿದೆ. ಈ ಹಿಂದೆ ಕೇಂದ್ರದಲ್ಲಿ ಜನತಾ ಪಕ್ಷ ಪ್ರಚಂಡ ಬಹುಮತದಿಂದ ಗೆದ್ದುಬಂದು, ಪ್ರಯೋಜಕ—ಅಧಿಕಾರದಾಸೆಯಿಂದ ಪಕ್ಷದಲ್ಲಿ ದೊಡ್ಡ ವ್ಯಕ್ತಿಗಳು ಬುದ್ಧಿ ಮಂಕಾಗಿಸಿಕೊಂಡವರು. ಇವರುಗಳ ನಡುವೆ ಜಗಳ ಹುಟ್ಟಿ, ಸರ್ಕಾರ ವಿಫಲಗೊಂಡು ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂತು. ಇವರುಗಳು 'ರಾಜ್ಯದ' ಗದ್ದಿಗೆ ಬರಿ ಅಧಿಕಾರದಾಸೆಯಿಂದ. ನಾವು ಮುಖ್ಯಮಂತ್ರಿ, ನಾವು

(ಆನೇ ಪುಟಕ್ಕೆ)

—ಮತದಾರರ ಅಭಿಪ್ರಾಯ—

ನಮ್ಮಲ್ಲಿಗೆ ಓಟು ಕೇಳಲು ಯಾರೂ ಬರುವುದಿಲ್ಲ ಏಕೆಂದರೆ ಅವರು ಬರಲು ರಸ್ತೆಗಳೇ ಇಲ್ಲ!!

ಮಾನ್ಯರೆ,

ತಾವು ಮತದಾರರ ಅಭಿಪ್ರಾಯ ಸಂಗ್ರಹಿಸಿ ಪ್ರಕಟಿಸುತ್ತಿರುವುದು ಶ್ಲಾಘನೀಯ. ಮೇಗುಂದಾ ಹೋಬಳಿ ಬಿಳಲುಕೊಪ್ಪ ಗ್ರಾಮಪಂಚಾಯ್ತಿ ಸಮುದಾಯಕ್ಕೆ ಒಳಪಟ್ಟ ನಂದಿಕೂಣಿ ಮತ್ತು ಹೆರ್ಗನಕುಡಿಗೆ ಗ್ರಾಮಸ್ಥರಾದ ನಾವು ನಮ್ಮ ಅಭಿಪ್ರಾಯವನ್ನು ತಮ್ಮ ಪತ್ರಿಕಾ ಪ್ರಕಟಣೆ ಬಗ್ಗೆ ಕಳುಹಿಸಿರುತ್ತೇವೆ.

ನಮ್ಮ ಗ್ರಾಮಕ್ಕೆ ಪ್ರಾಥಮಿಕ ಪಾಠಶಾಲೆಯಾಗಲಿ, ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ಮಾರ್ಗಸೌಕರ್ಯವಾಗಲಿ ಇಲ್ಲದೆ ಎಲ್ಲಾ ಸವಲತ್ತುಗಳಿಂದಲೂ ವಂಚಿ

(ಆನೇ ಪುಟಕ್ಕೆ)

ಮತ ಚಲಾವಣೆ ಹಕ್ಕನ್ನು ವಿವೇಚನೆಯಿಂದ ಚಲಾಯಿಸಿ

ಎಷ್ಟೋ ಜೀವಗಳ ರಕ್ತತರ್ಪಣ ಕೊಟ್ಟು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ಅದರಿಂದಾಗಿ, ದೇಶದ ಜನತೆಗೆ ತಮ್ಮದೇ ಸರಕಾರವನ್ನು ರಚಿಸುವರೆ 'ಮತ ಚಲಾವಣೆ'ಯ ಹಕ್ಕು ದೊರಕಿತು. ಆದರೆ ಅಂದು ಅಷ್ಟು ಪವಿತ್ರವೆಂದು ಪರಿಗಣಿಸಲ್ಪಟ್ಟಿದ್ದ ಮತಗಳು ಇಂದು ಹೇಗಾಗಿವೆ?

ತಮಗೆ ಎಂಥ ಸರ್ಕಾರ ಬೇಕು? ಯಾವ ಪಕ್ಷ ಬೇಕು? ಪ್ರತಿನಿಧಿಯಾಗಲು ಪ್ರಾಮಾಣಿಕ ವ್ಯಕ್ತಿ ಯಾರು? ಎಂಬ ಸ್ವತಂತ್ರ ಅಭಿಪ್ರಾಯ ರೂಪಿಸಲು ಮತ ಚಲಾಯಿಸುತ್ತೇವೆ. ಯಾವುದೇ ಪಕ್ಷ ಯಾವುದೇ ಆಶ್ವಾಸನೆ ಕೊಡುತ್ತ ಹೋಗುತ್ತದೆ. ಆದರೆ ಆ ಆಶ್ವಾಸನೆಗಳು ಜನಸಾಮಾನ್ಯರಿಗೆ, ದೀನ-ದಲಿತರಿಗೆ ಸಹಾಯಕವಾಗಿ ಮುಟ್ಟಿವೆಯೆ? ಇದು ಕಂಡುಕೊಳ್ಳಬೇಕು. ಬರೀ ಆಶ್ವಾಸನೆಯಾಗಿ ಉಳಿದರೆ ಅದನ್ನು ತಮ್ಮ ಮತದ ಮೂಲಕ ಉತ್ತರಿಸಬೇಕು. ಇದೇ ಪ್ರಜಾಸತ್ತಾತ್ಮಕ ಹಕ್ಕು ಆಗಿದೆ.

ಗಾಂಧೀಜಿಯವರು ಯಾವತ್ತೂ ಸತ್ಯ, ಧರ್ಮ, ನ್ಯಾಯಕ್ಕಾಗಿ ಹೋರಾಡುತ್ತಿದ್ದರು; ಅಂಥ ಸತ್ ಚಾರಿತ್ರ್ಯ ಇದ್ದವರನ್ನೇ ಪ್ರೀತಿಸುತ್ತಿದ್ದರು. ನಾವೂ ಅಂಥ ಸತ್ ಚಾರಿತ್ರ್ಯವುಳ್ಳ ಪಕ್ಷ—ಅದರ ಪ್ರತಿನಿಧಿ-ಸರ್ಕಾರವ [illegible] ನಮ್ಮ ಮತ [illegible] ಬರುತ್ತದೆ. [illegible] ನಮ್ಮ [illegible]

ಸ್ಥಿರವಾದ ಪಕ್ಷ ಸ್ವಾತಂತ್ರ್ಯ ಎನ್ನಿಸಿಕೊಳ್ಳುತ್ತದೆ. ಆದ್ದರಿಂದ ನಾವೆಲ್ಲರೂ ನಮ್ಮ ಪವಿತ್ರ ಮತಗಳು ಹಾಳಾಗದಂತೆ ನಮ್ಮ ಆತ್ಮಸಾಕ್ಷಿಗನುಗುಣವಾಗಿ ಉತ್ತಮ ಸ[illegible] ಅವರನ್ನೇ ಆಯ್ಕೆ ಮಾಡಬೇಕೆಂದು ನನ್ನ ಹಾರೈಕೆ.

[illegible]

ಕೃಷಿ ಇಲಾಖೆ ಕೊಡುಗೆ

ಉತ್ತಮೇಶ್ವರ: ಬೆಳವಿನ ಕೊಡಿಗೆ ಗ್ರಾಮಪಂಚಾಯ್ತಿ ವ್ಯಾಪ್ತಿಯ ೧೫ ಹರಿಜನರಿಗೆ ಭತ್ತದ ೫ನೇ ಬೆಳೆ ಸಾಗುವಳಿಗಾಗಿ ಕೃಷಿ ಸಲಕರಣೆಗಳು, ಬೀಜ, ಗೊಬ್ಬರ, ಔಷಧಿಗಳನ್ನು ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಎಸ್.ಸುಬ್ಬಯ್ಯಗೌಡರು ಡಿ. ೨೧ರಂದು ಹಂಚಿದರು. ಕೃಷಿ ವಿಸ್ತರಣಾಧಿಕಾರಿ ವೆಂಕಟ ಭಟ್ ಹಾಜರಿದ್ದರು.

ಆಸ್ಪತ್ರೆ ಪ್ರಾರಂಭ

ಇಲ್ಲಿನ ಸರ್ಕಾರಿ ಆಸ್ಪತ್ರೆ (ಪ್ರಾಥಮಿಕ ಆರೋಗ್ಯ ಘಟಕ) ಡಿ.೬ರಿಂದ ಕೆಲಸ ಶುರು ಮಾಡಿದೆ. ಸೋಮವಾರ ಮತ್ತು ಗುರುವಾರಗಳಂದು ಮಧ್ಯಾಹ್ನ ೨ರಿಂದ ೫ರವರೆಗೆ ಕೊಪ್ಪದ ವೈದ್ಯಾಧಿಕಾರಿ ಡಾ॥ ರಂಗನಾಥನ್ ಇಲ್ಲಿಗೆ ಭೇಟಿಕೊಡುತ್ತಾರೆ. ಉಳಿದ ದಿನಗಳಲ್ಲಿ ಮಿಡ್ ವೈಫ್‌ಗಳೇ ನೋಡಿಕೊಳ್ಳುತ್ತಾರೆ. ಆಸ್ಪತ್ರೆಯ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕೆಂದು ಆಸ್ಪತ್ರೆ ಸಮಿತಿಯವರು ಜನರನ್ನು ಕೋರಿದ್ದಾರೆ.

ಕೊಪ್ಪ ಪಂಚಾಯಿತಿ ಉಪಾಧ್ಯಕ್ಷರಾಗಿ ಎಸ್.ಪಿ.ಚಂದ್ರಶೇಖರ್

ಕೊಪ್ಪ: ಇಲ್ಲಿನ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ಸ್ಥಾನಕ್ಕೆ ಡಿ. ೨೨ರಂದು ನಡೆದ ಚುನಾವಣೆಯಲ್ಲಿ ನಗದಾಳಿನ ಎಸ್.ಪಿ. ಚಂದ್ರಶೇಖರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

'ಬಡವ' ಪತ್ರಿಕೆ ಆರಂಭ

ಚಿಕ್ಕಮಗಳೂರು: ಖ್ಯಾತ ಯುವ ಪತ್ರಕರ್ತ ಬಿ.ಎಸ್. ಶೇಷಾದ್ರಿಯವರ ಸಂಪಾದಕತ್ವದ 'ಬಡವ' ಖಾಸಗಿ ಪ್ರಸಾರದ ವಾರ ಪತ್ರಿಕೆಯನ್ನು ಇಲ್ಲಿನ ಮುರಳೀಧರ್ ಮಿಲ್ಕ್ ಬಾರ್‌ನ ಕಾರ್ಮಿಕ ಮೋರಿಸ್ ಡಿ. ೧೯ರಂದು ಬಿಡುಗಡೆ ಮಾಡಿದರು. ಟಿ.ಸುಬ್ರಮಣ್ಯಂ ಮುಖ್ಯ ಅತಿಥಿಗಳಾಗಿದ್ದರು.

ಬೇಸಿಗೆ ಬೆಳೆ ಆಂದೋಳನ

ಅಡ್ಡಗದ್ದೆ: ೧೯೮೨-೮೩ನೇ ಸಾಲಿನ ಬೇಸಿಗೆ ಬೆಳೆಗಳ ಆಂದೋಳನ ಕಾರ್ಯಕ್ರಮ ಶೃಂಗೇರಿ ತಾ॥ ಕೃಷಿ ಇಲಾಖೆ ಹಾಗೂ ಇಲ್ಲಿನ ಸಿಂಡಿಕೇಟ್ ಬ್ಯಾಂಕ್‌ನ ಜಂಟಿ ಆಶ್ರಯದಲ್ಲಿ ಡಿ. ೧೪ರಂದು ಇಲ್ಲಿ ನಡೆಯಿತು. ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಹೆಚ್.ಎಂ.ಸುರೇಶ್, ಶೃಂಗೇರಿ ತಾ॥ ಸ॥ ಕೃಷಿ ನಿರ್ದೇಶಕರಾದ ಎ.ಬಿ.ಮುದ್ದಲಿಂಗೇಗೌಡ ಹಾಗೂ ಮೂಡಿಗೆರೆಯ ಪ್ರಾದೇಶಿಕ ಕೃಷಿ ಸಂಶೋಧನಾ ಕೇಂದ್ರದ ತಜ್ಞರುಗಳು ರೈತರಿಗೆ ಸೂಕ್ತ ಮಾಹಿತಿಗಳನ್ನು ನೀಡಿದರು.

ತಾ॥ ಅ॥ ಮಂ॥ ಅಧ್ಯಕ್ಷ ಡಿ.ಕಳಸಪ್ಪ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಬ್ಯಾಂಕಿನ ಶಾಖಾ ಮ್ಯಾನೇಜರ್ ಎ.ಎ.ಗಾಂಧಿ ಸ್ವಾಗತಿಸಿ, ಕೃಷಿ ಸಹಾಯಕ ಬಿ.ಕೆ.ರಂಗಪ್ಪ ವಂದಿಸಿದರು.

ರಾಷ್ಟ್ರೀಯ ದೈಹಿಕ ಅರ್ಹತಾ ಪರೀಕ್ಷೆ

ಕೊಪ್ಪ: ಇಲ್ಲಿನ ಸರ್ಕಾರಿ ಕಿರಿಯ ಕಾಲೇಜಿನ ರಾಷ್ಟ್ರೀಯ ದೈಹಿಕ ಅರ್ಹತಾ ಕಾರ್ಯಕ್ರಮ ಕೇಂದ್ರದ ಆಶ್ರಯದಲ್ಲಿ ತಾ ೨೯-೧೨-೮೨ ಮತ್ತು ೩೦-೧೨-೮೨ರಂದು ಕೊಪ್ಪ ಜನರಲ್ ಆಸ್ಪತ್ರೆ ಮೈದಾನದಲ್ಲಿ ರಾಷ್ಟ್ರೀಯ ದೈಹಿಕ ಅರ್ಹತಾ ಪರೀಕ್ಷೆ ನಡೆಯಲಿದೆ. ಎಲ್ಲ ವರ್ಗದ ಎಲ್ಲ ವಯಸ್ಸಿನ ಪುರುಷ/ಮಹಿಳೆಯರೂ ಭಾಗವಹಿಸಬಹುದಾದ ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಕೇಂದ್ರ ಸರ್ಕಾರ ಒದಗಿಸುವ ಪ್ರಶಸ್ತಿ ಪತ್ರ ಹಾಗೂ ನಕ್ಷತ್ರ ಬ್ಯಾಡ್ಜ್‌ಗಳನ್ನು ನೀಡಲಾಗುವುದು.

ಈ ಬಗ್ಗೆ ಹೆಚ್ಚಿನ ವಿಷಯಗಳಿಗೆ ಹೆಚ್.ಎ.ಗೋಪಾಲ, ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ರಾಷ್ಟ್ರೀಯ ದೈಹಿಕ ಅರ್ಹತಾ ಕಾರ್ಯಕ್ರಮ ಕೇಂದ್ರದ ವ್ಯವಸ್ಥಾಪಕರು, ಸರ್ಕಾರಿ ಕಿರಿಯ ಕಾಲೇಜು, ಕೊಪ್ಪ ಇವರನ್ನು ಸಂಪರ್ಕಿಸಲು ಕೋರಿದೆ.

ಶಾಲಾ ಕ್ರೀಡಾಕೂಟ

ಬಸರಿಕಟ್ಟೆ: ಇಲ್ಲಿನ ಶ್ರೀ ಸದ್ಗುರು ಪ್ರೌಢಶಾಲೆಯ ವಾರ್ಷಿಕ ಕ್ರೀಡಾಕೂಟ ಡಿ. ೩೦ ಮತ್ತು ೩೧ರಂದು ನಡೆಯಲಿದೆ. ಜಿ.ವಿ. ನರೇಂದ್ರ ಅವರ ಅಧ್ಯಕ್ಷತೆಯಲ್ಲಿ ಡಾ॥ಬಿ.ಎಸ್. ಶೇಷಗಿರಿರಾವ್ ಅವರಿಂದ ಉದ್ಘಾಟನೆ ಹಾಗೂ ಕೆ.ಎಸ್.ಸುಬ್ರಹ್ಮಣ್ಯ ಅವರ ಅಧ್ಯಕ್ಷತೆಯಲ್ಲಿ ಹೆಚ್.ಎ.ಗೋಪಾಲ ಅವರಿಂದ ಮುಕ್ತಾಯ ಭಾಷಣ ನಡೆಯಲಿವೆ.

ಅಡಿಕೆ ಧಾರಣೆ

ಕೊಪ್ಪ: ಇಲ್ಲಿನ ಮಾರ್ಕೋಸ್ ಶಾಖೆಯಲ್ಲಿ ದಿ.೧೯-೧೨-೮೨ರಂದು ಬಿಕರಿಯಾದ ಅಡಿಕೆಯ ಧಾರಣೆ ಈ ಕೆಳಗಿನಂತಿದೆ: ಹಸ— ೧೬೫೦ರಿಂದ ೧೯೧೧; ಬೆಟ್ಟೆ — ೯೫೦ರಿಂದ ೧೧೧೫; ಮತ್ತು ಗೊರಬಲು— ೪೧೧ರಿಂದ ೬೧೯.

ಈ ಶಾಖೆಯಲ್ಲಿ ಮುಂದಿನ ವ್ಯಾಪಾರ ೨-೧-೮೩ರಂದು ನಡೆಯಲಿದೆ.

ಮತಕ್ಕೆ ಬೆಲೆ ಬರಬೇಕಾದರೆ

(೩ನೇ ಪುಟದಿಂದ)

ಅರಣ್ಯ ಮಂತ್ರಿ ಮುಂತಾಗಿ ಪರಸ್ಪರ ಕಚ್ಚಾಟದಿಂದಲೇ ಮತ್ತೆ ಮರು ಚುನಾವಣೆ ನಡೆಸಲು ಆಸ್ಪದ ನೀಡಿಯಾರು! ಯಾರಿಗೆ ಹೊಣೆ!! (ಈ ಚುನಾವಣೆಯಲ್ಲಿ ಎಮ್ಮೆ ಕೊಡಿಸಿದವರು ಮರುಸಲ ಆನೆ ಕೊಡಿಸಿಯಾರು?)

ಆದುದರಿಂದ ನನ್ನ ಅಭಿಪ್ರಾಯವೇನೆಂದರೆ, ಯಾರೇ ಗೆದ್ದರೂ, ಯಾರೇ ಅಧಿಕಾರಕ್ಕೆ ಬಂದರೂ, ಅವರುಗಳ ಆಸ್ತಿ ಭರ್ತಿಯೇ ಹೊರತು ಏನೂ ಪ್ರಯೋಜನವಿಲ್ಲ. ಇದುವರೆಗೂ ಕಾಂಗ್ರೆಸ್ ಪಕ್ಷಕ್ಕೆ ಮತ ಕೊಡುತ್ತಿದ್ದೀರಿ. ಇನ್ನೂ ಅಷ್ಟೆ! ಐವತ್ತು ವರ್ಷ ಕಳೆದರೂ ಅಷ್ಟೇ ಅನ್ನೋದು ಜನರಿಗೆ ಮನವರಿಕೆಯಾಗಿದೆ. ಆದುದರಿಂದ **ನಿಮ್ಮ ಮತಕ್ಕೆ ಬೆಲೆ ಬೇಕೆಂದರೆ, ಕಾಂಗ್ರೆಸ್ಸಿಗೆ ನೀಡಿ.**

—ವಿ.ಎಸ್.ವೆಂಕಟೇಶ್, ಕೊಪ್ಪ.

ಓಟು ಕೇಳಲು ಬರಲು ರಸ್ತೆಗಳೇಯಿಲ್ಲ

(೩ನೇ ಪುಟದಿಂದ)

ತರಾದ ನಾವು ಯಾವ ಪಕ್ಷಕ್ಕೆ ಮತ ನೀಡಬೇಕೆಂಬುದೇ ವಿವಾದದ ಸಂಗತಿಯಾಗಿದೆ. ಯಾವ ಪಕ್ಷದವರೂ ನಮ್ಮ ಗ್ರಾಮಕ್ಕೆ ಮತಯಾಚನೆಗೆ ಬರುವುದಿಲ್ಲ. ಕಾರಣ ವೇನೆಂದರೆ ಅವರ ವಾಹನಗಳು ನಮ್ಮಲ್ಲಿಗೆ ಬರಲು ರಸ್ತೆಗಳೇ ಇಲ್ಲ!

ಮಳೆಗಾಲದಲ್ಲಿ ದೂರದ ಬಿಳಲುಕೊಪ್ಪ ಅಥವಾ ಬಸರಿಕಟ್ಟೆಗೆ ಮಕ್ಕಳು ಸ್ಕೂಲಿಗೆ ಹೋಗಿಬರಲು ಹಳ್ಳಗಳಿಗೆ ಸೇತುವೆ ಇಲ್ಲ. ಗದ್ದೆ ಅಂಚಿನಲ್ಲಿ ಮೊಣಕಾಲುದ್ದ ಕೆಸರಿನಲ್ಲಿ ನಡೆದುಕೊಂಡು, ಮಕ್ಕಳಷ್ಟೇ ತೂಕದ ಪುಸ್ತಕ, ಮಧ್ಯಾಹ್ನದ ಊಟ, ಛತ್ರಿಗಳನ್ನು ಹೊತ್ತುಕೊಂಡು ಹೋಗಿಬರುವ ಮಕ್ಕಳ ಬವಣೆಯನ್ನು ನೋಡಿದಾಗ-ನಮ್ಮಿಂದ ಓಟು ಪಡೆದ ಶಾಸಕರಿಗೆ [illegible] ನಿವೃತ್ತಿವೇತನ, ಕುಟುಂಬ ವೇತನ ಇತ್ಯಾದಿ ಕೊಡಿಸಲಿಕ್ಕಾಗಿ ಮಾತ್ರ "ನಮ್ಮಮತ" ಎಂಬ ಅಭಿಪ್ರಾಯ ನಮ್ಮಲ್ಲಿ ಮೂಡಿದರೆ ತಪ್ಪಿಲ್ಲವಷ್ಟೆ?

ಎಲ್ಲಾ ನಾಗರಿಕ ಸೌಕರ್ಯಗಳಿಂದಲೂ ವಂಚಿತರಾದ, ಗೇಣಿದಾರರಾದ ನಮ್ಮಗಳಿಗೆ ಆಳುವಪಕ್ಷ ಆರು ಚುನಾವಣೆಗಳಲ್ಲೂ ವಂಚನೆ ಮಾಡಿದೆ. ವಿರೋಧ ಪಕ್ಷದವರು ಈ ಕ್ಷೇತ್ರದಲ್ಲಿ ಇದುವರೆಗೆ ಆರಿಸಿ ಬಂದಿಲ್ಲ. ನಮ್ಮಲ್ಲಿಗೆ ಬಂದು, ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಮಗೆ ಮಾರ್ಗದರ್ಶನವನ್ನೂ ಮಾಡಿಲ್ಲ. ನಮ್ಮ ಕಷ್ಟ ಕೇಳುವವರು ಯಾರು? ನಾವು ಏಕೆ ಮತ ನೀಡಬೇಕು?

–ಕೃಷ್ಣಮೂರ್ತಿ, ಹೆರ್ತನಕುಡಿಗೆ
ಶೇಷಗಿರಿ, ನಂದಿಕುಣಿ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ



